**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರು ಮಂಡಿಸಿರುವ ಶೂನ್ಯ ವೇಳೆ ಸೂಚನೆಗೆ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಉತ್ತರ**

*****

**ಪ್ರಶ್ನೆ:** ರಾಜ್ಯದ ಸಾಂಸ್ಕೃತಿಕ ವಲಯದ ಹೆಗ್ಗುರುತು ರಂಗಾಯಣ, ರಂಗಭೂಮಿಗೆ ಹೊಸ ದಿಕ್ಕನ್ನು ನೀಡುವ ಜೊತೆಗೆ ರಂಗ ಸಂಸ್ಕೃತಿಯನ್ನು ಎಲ್ಲಡೆ ಹಬ್ಬಿಸುವ ಉದ್ದೇಶದಿಂದ ಬಿ.ವಿ.ಕಾರಂತರು ಮೈಸೂರಿನಲ್ಲಿ ರಂಗಾಯಣ ಸಂಸ್ಥೆಯನ್ನು ಸ್ಥಾಪಿಸಿದರು. ಇಂದು ರಾಜ್ಯದಲ್ಲಿ ಮೈಸೂರು, ಶಿವಮೊಗ್ಗ, ಧಾರವಾಡ, ಕಲಬುರಗಿ, ದಾವಣಗೆರೆ ಹಾಗೂ ಉಡುಪಿ ಸೇರಿದಂತೆ ಒಟ್ಟು 6 ರಂಗಾಯಣಗಳು ಕಾರ್ಯನಿರ್ವಹಿಸುತ್ತಿವೆ.

2023-24ನೇ ಸಾಲಿನಲ್ಲಿ ಮೈಸೂರು ರಂಗಾಯಣಕ್ಕೆ ನಿಗದಿಯಾಗಿದ್ದ 60.00ಲಕ್ಷ ರೂಪಾಯಿಗಳಲ್ಲಿ ನೀಡಿದ್ದು ರೂ.40.00ಲಕ್ಷ ಮಾತ್ರ, ಇದರಲ್ಲಿ ಗುತ್ತಿಗೆ ನೌಕರರ ವೇತನ, ವಿದ್ಯುತ್ ಬಿಲ್, ನಾಲ್ಕು ರಂಗ ಮಂದಿರಗಳ ನಿರ್ವಹಣೆ, ಕಛೇರಿ ವೆಚ್ಚ, ಭಾರತೀಯ ರಂಗ ಶಿಕ್ಷಣ ವಿದ್ಯಾರ್ಥಿಗಳ ಶಿಷ್ಯ ವೇತನ, ಸಂಗೀತಗಾರರು ಮತ್ತು ಶಿಕ್ಷಕರ ಸಂಭಾವನೆ ಹಾಗೂ ಇತರೆ ವೆಚ್ಚಗಳನ್ನು ಭರಿಸಬೇಕು. ಆದರೆ ಸರ್ಕಾರ ರಂಗಾಯಣಗಳಿಗೆ ನೀಡುವ ವಾರ್ಷಿಕ ಅನುದಾನವನ್ನು ಮೊಟಕುಗೊಳಿಸಿದೆ. ಇದರ ಪರಿಣಾಮ ರಂಗ ಚಟುವಟಿಕೆಗಳಿಲ್ಲದೆ ರಂಗಾಯಣಗಳು ಸ್ತಬ್ದಗೊಂಡಿವೆ. ವಾರ್ಷಿಕ ಅನುದಾನಕ್ಕೆ ಕತ್ತರಿ ಬಿದ್ದ ಪರಿಣಾಮ ಹೊಸ ನಾಟಕಗಳನ್ನು ನಡೆಸಲಾಗುತ್ತಿಲ್ಲ. ಇದರಿಂದ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ತೊಂದರೆಯಾಗುತ್ತದೆ. ಪ್ರತಿ ವರ್ಷ ಜನವರಿಯ ಸಂಕ್ರಾಂತಿಯ ಹಬ್ಬದ ಸಮಯದಲ್ಲಿ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ನಡೆಸಿ 50 ರಿಂದ 75 ಲಕ್ಷ ರೂ. ಅನುದಾನ ಸರ್ಕಾರದಿಂದ ಲಭ್ಯವಾಗುತ್ತಿತ್ತು. ಈ ವರ್ಷ ನಿರ್ದೇಶಕರಿಲ್ಲದ ಕಾರಣ ಬಹುರೂಪಿಯನ್ನು ಮಾರ್ಚ್ ನಲ್ಲಿ ನಡೆಸಲಾಗುತ್ತಿತ್ತು. ಅದಕ್ಕೆ ಸರ್ಕಾರ ನೀಡಿದ್ದು ಕೇವಲ 25 ಲಕ್ಷ ರೂ. ಮಾತ್ರ.

ರಂಗಾಯಣಗಳು ಇನ್ನೂ ಬಾಲ್ಯವಸ್ಥೆಯಲ್ಲೇ ಇವೆ. ಸರ್ಕಾರ ಅಸ್ತಿತ್ವಕ್ಕೆ ಬಂದು 10 ತಿಂಗಳಾದರೂ ರಂಗಾಯಣಗಳಿಗೆ (ರೆಪರ್ಟರಿ) ನಿರ್ದೇಶಕರ ನೇಮಕವಾಗಿಲ್ಲ, ನಿರ್ದೇಶಕರ ನೇಮಕವಾಗಬೇಕಾದರೆ ಮೊದಲು ರಂಗ ಸಮಾಜ ಸ್ಥಾಪನೆ ಆಗಬೇಕು ನಂತರ ನಿರ್ದೇಶಕರನ್ನು ಆಯ್ಕೆ ಮಾಡಬೇಕು. ಹೊಸ ಯೋಜನೆಗಳಿಲ್ಲದೆ ರಂಗಾಯಣ ಅತಂತ್ರವಾಗಿದೆ. ಕಲಾವಿದರ ನೇಮಕವಾಗದೆ ರಂಗ ಚಟುವಟಿಕೆಗಳು ಸ್ತಬ್ದವಾಗಿದೆ.

ಸರ್ಕಾರ ಸಾಂಸ್ಕೃತಿಕ ಹೆಗ್ಗುರುತು ರಂಗಾಯಣ ವಿಷಯದಲ್ಲಿ ನಿರ್ಲಕ್ಷ್ಯ ತೋರುತ್ತಿದೆ. ರಂಗಾಯಣದ ಮೂಲ ಉದ್ದೇಶವನ್ನು ಸರ್ಕಾರ ಮರೆತಂತಿದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ

ಕಾರ್ಯನಿರ್ವಹಿಸುತ್ತಿರುವ ರಂಗಾಯಣ ಸಂಸ್ಥೆಗಳಿಗೆ ಸರಿಯಾದ ಅನುದಾನ ನೀಡಿಲ್ಲ. ನಾಟಕ ತರಬೇತಿ, ಕಾರ್ಯಾಗಾರ, ನಾಟಕೋತ್ಸವ ಯಾವುದನ್ನು ನಡೆಸಲು ಸಾಧ್ಯವಾಗುತ್ತಿಲ್ಲ ಸರ್ಕಾರ ಇದರ ಬಗ್ಗೆ ಶೀಘ್ರವಾಗಿ ಕಾರ್ಯಪ್ರವೃತ್ತರಾಗಿ ಅನುದಾನ ಒದಗಿಸಬೇಕಾಗಿದೆ. ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಬೇಕೆಂದು ಕೋರುತ್ತೇನೆ.

*****

**ಉತ್ತರ:** ರಂಗಕಲೆಯನ್ನು ಉಳಿಸಿ ಬೆಳೆಸುವ ದೃಷ್ಟಿಯಿಂದ ರಂಗಕಲೆಗಳಲ್ಲಿ ಆಸಕ್ತಿ ಇರುವವರನ್ನು ಸಂಘಟಿಸಿ, ಉತ್ತೇಜನ ನೀಡಿ ಅವರು ರಂಗಕಲೆಯಲ್ಲಿ ಪಾಲ್ಗೊಳುವಂತೆ ಮಾಡುವುದು; ಬೋಧನೆ ಮತ್ತು ರಂಗಶಿಕ್ಷಣ ನೀಡುವುದು ಹಾಗೂ ರಂಗಭೂಮಿ ಮತ್ತು ಅದಕ್ಕೆ ಸಂಬಂಧಿಸಿದ ಕಲೆಗಳನ್ನು ಕುರಿತು ದಾಖಲೆ ಸಂಗ್ರಹ, ಸಂಶೋಧನೆ ಕಾರ್ಯ ಮತ್ತು ತತ್ಸಂಬಂಧಿತ ವಿಷಯಗಳ ಪ್ರಸಾರಕ್ಕೆ ಪತ್ರಿಕೆ ಲೇಖನ, ಕಿರುಹೊತ್ತಿಗೆ, ಪುಸ್ತಕ ಇತ್ಯಾದಿಗಳನ್ನು ಪ್ರಕಟಿಸುವುದು, ಹೊಸ ನಾಟಕಗಳನ್ನು ಮತ್ತು ಪರಭಾಷೆಯ ನಾಟಕಗಳನ್ನು ಪ್ರಕಟಿಸುವುದು, ದೇಶವಿದೇಶಗಳಿಂದ ರಂಗತಜ್ಞರನ್ನು/ಸಂಶೋಧಕರನ್ನು ಆಹ್ವಾನಿಸಿ ನಾಟಕಗಳ ರಚನೆ, ನಿರ್ದೇಶನ, ಪ್ರದರ್ಶನ, ಶಿಕ್ಷಣ ಶಿಬಿರ, ಉಪನ್ಯಾಸ, ವಿಚಾರ ಸಂಕಿರಣ, ನಾಟಕೋತ್ಸವ ಮತ್ತು ಇತ್ಯಾದಿ ಉದ್ದೇಶಗಳನ್ನು ಇಟ್ಟುಕೊಂಡು ರಂಗಾಯಣಗಳನ್ನು ಸ್ಥಾಪಿಸಲಾಗಿದೆ.

ಈ ನಿಟ್ಟಿನಲ್ಲಿ ರಾಜ್ಯದಲ್ಲಿ 06 ರಂಗಾಯಣಗಳನ್ನು ಸ್ಥಾಪಿಸಲಾಗಿದ್ದು, ಪ್ರಸಕ್ತ 2023-24ನೇ ಸಾಲಿನಲ್ಲಿ ಕೆಳಕಂಡಂತೆ, ರಂಗಾಯಣಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ.

| ಕ್ರ. ಸಂ. | ರಂಗಾಯಣದ ಹೆಸರು | 2023-24ನೇ ಸಾಲಿನಲ್ಲಿ ರಂಗಾಯಣಗಳಿಗೆ ಹಂಚಿಕೆಯಾಗಿರುವ ಅನುದಾನ (ರೂ.ಲಕ್ಷಗಳಲ್ಲಿ ) | 2023-24ನೇ ಸಾಲಿನಲ್ಲಿ ರಂಗಾಯಣಗಳಿಗೆ ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 1. | ಮೈಸೂರು ರಂಗಾಯಣ | 60.00 | 55.00 |
| 2. | ಧಾರವಾಡ ರಂಗಾಯಣ | 40.00 | 36.66 |
| 3. | ಶಿವಮೊಗ್ಗ ರಂಗಾಯಣ | 35.00 | 28.32 |
| 4. | ಕಲಬುರಗಿ ರಂಗಾಯಣ | 35.00 | 28.32 |
| 5. | ವೃತ್ತಿ ರಂಗಭೂಮಿ ರಂಗಾಯಣ ಕೇಂದ್ರ, ದಾವಣಗೆರೆ | 25.00 | 25.00 |
| 6. | ಯಕ್ಷರಂಗಾಯಣ ಕಾರ್ಕಳ | 30.00 | 25.00 |

ರಂಗಸಮಾಜದ ಬೈಲಾದಲ್ಲಿ ನಿರ್ದೇಶಕರು ಮತ್ತು ರಂಗಸಮಾಜದ ಸದಸ್ಯರನ್ನು ನೇಮಕ ಮಾಡಲು ಅವಕಾಶವಿದ್ದು, ಅದರನ್ವಯ ರಂಗಭೂಮಿ ಕ್ಷೇತ್ರದಲ್ಲಿನ ಪರಿಣಿತರನ್ನು

..3...

ಸಾಮಾಜಿಕ ನ್ಯಾಯತತ್ವದ ಆಧಾರದ ಮೇಲೆ, ನಿರ್ದೇಶಕರು ಮತ್ತು ರಂಗಸಮಾಜದ ಸದಸ್ಯರನ್ನು ನೇಮಕ ಮಾಡಲಾಗುತ್ತದೆ. ಅಧ್ಯಕ್ಷರು ಮತ್ತು ಸದಸ್ಯರ ನೇಮಕಕ್ಕೆ ಪ್ರತ್ಯೇಕವಾದ ಮಾನದಂಡಗಳು ಇರುವುದಿಲ್ಲ. ಪ್ರಸ್ತುತ ರಂಗಾಯಣಗಳಿಗೆ ನಿರ್ದೇಶಕರು ಮತ್ತು ರಂಗಸಮಾಜದ ಸದಸ್ಯರನ್ನು ನೇಮಕ ಮಾಡುವ ಕುರಿತು ಪರಿಶೀಲಿಸಲಾಗುತ್ತಿದೆ.

ಕಡತ ಸಂಖ್ಯೆ: ಕಸಂವಾ 28 ಕವಿಸ 2024

**(ಶಿವರಾಜ.ಎಸ್.ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.